ಶ್ರೀ ಬಿ.ಬಿ.ಚಿಮ್ಮನಕಟ್ಟಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಅಂತ ಯೋಜನೆಗಳು ಸರ್ಕಾರದ ಮುಂದೆ ಇದೆಯೇ ಎಂದು ಕೇಳಿದ್ದಾರೆ, ಅಂಥ ಪ್ರಸ್ತಾವನೆಗಳು ಹಾಗೂ ಮಂಜೂರಾತಿಗಾಗಿ ಸರ್ಕಾರದ ಮುಂದೆ ಇಲ್ಲ, ತಮಗೆ ಏನು ಯೋಜನೆ ಬೇಕು ಎಂದು ಕೇಳುತ್ತೀರಿ, ಮಹಾನಗರ ಪಾಲಿಕೆಗೆ ತಿಳಿಸಿ ಆ ಯೋಜನೆಯನ್ನು ನಾವು ಕಾರ್ಯಗತಗೊಳಿಸುವುದಕ್ಕೆ ಪ್ರಯತ್ನಿಸುತ್ತೇವೆ.

ಬೆಂಗಳೂರು ನಗರವನ್ನು ಸಿಂಗಾಪುರ ಮಾದರಿ ನಗರವನ್ನಾಗಿ ಪರಿವರ್ತಿಸುವ ವಿಚಾರ.

340(3463)

ಶ್ರೀ ಶ್ರೀನಿವಾಸಗೌಡ ಕುದುವನಹಳ್ಳಿ.ಕೆ. (ಕೋಲಾರ): ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ನಗರವನ್ನು ಸಿಂಗಾಪುರ ಮಾದರಿಯಲ್ಲಿ ಪರಿವರ್ತಿಸಲು ಇಲ್ಲಿಯವರೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಹಣವೆಷ್ಟು?

ಆ) ಬೆಂಗಳೂರು ನಗರವನ್ನು ಸೌಂದರ್ಯಗೊಳಿಸಲು ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಿಡುಗಡೆಯಾಗಿದೆ?

ಇ) ಬೆಂಗಳೂರು ನಗರವನ್ನು ಸಿಂಗಾಪೂರ್ ಮಾದರಿಯಲ್ಲಿ ಪರಿವರ್ತನೆಗೊಳಿಸಲು ಯಾವ ಯಾವ ಕಾರ್ಯಕ್ರಮ ಹಾಕಿಕೊಳ್ಳಲಾಗಿದೆ?

ಈ) ಇನ್ನು ಎಷ್ಟು ವರ್ಷಗಳಲ್ಲಿ ಬೆಂಗಳೂರು ನಗರ ಸಿಂಗಾಪುರ್ ಮಾದರಿಯಲ್ಲಿ ಪರಿವರ್ತನೆಯಾಗುತ್ತದೆ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು):

ಅ) ಬೆಂಗಳೂರು ನಗರವನ್ನು ಸಿಂಗಾಪುರ್ ಆಗಿ ಬದಲಾಯಿಸುವ ಉದ್ದೇಶ ಸರ್ಕಾರಕ್ಕಿಲ್ಲ. ಆದರೆ, ಸಾರ್ವಜನಿಕರಿಗೆ ಬೆಂಗಳೂರು ನಗರವನ್ನು ಸಿಂಗಾಪುರ್‌ನ್ನು ಮಾದರಿಯಾಗಿಟ್ಟುಕೊಂಡು ಅಭಿವೃದ್ಧಿ ಮತ್ತು ಮೇಲ್ವಿಚಾರಣೆ ಮಾಡುವ ಹಾಗೂ ಬೆಂಗಳೂರು ನಗರವನ್ನು ನವೀನ ಮತ್ತು ಸ್ವಚ್ಛ ನಗರವನ್ನಾಗಿ ಮಾರ್ಪಡಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆ ಎಂದು ತಿಳಿಸುವ ಉದ್ದೇಶ ಸರ್ಕಾರಕ್ಕಿದೆ.

ಸರ್ಕಾರವು ಬೆಂಗಳೂರು ನಗರದ ಅಭಿವೃದ್ಧಿಗಾಗಿ ಈ ಕೆಳಕಂಡಂತೆ ಹಣ ಬಿಡುಗಡೆ ಮಾಡಿರುತ್ತದೆ.

	1999-2000	2000-01
1. ಮೋಟಾರಬಲ್ ರಸ್ತೆಗಳ ಅಭಿವೃದ್ಧಿ:	20.00 ಕೋಟಿ	
2. ಅಭಿವೃದ್ಧಿ ಕಾಮಗಾರಿಗಳಿಗೆ	10.00 ಕೋಟಿ	
3. 10ನೇ ಹಣಕಾಸು ಆಯೋಗದ ಅನುದಾನ	0.46 ಕೋಟಿ	0.31 ಕೋಟಿ
4. ಹೈಪವರ್ ಸಮಿತಿ ಅನುದಾನ	10.00 ಕೋಟಿ	2.00 ಕೋಟಿ

ಆ) ಕೇಂದ್ರ ಪುರಸ್ಕೃತ ಯೋಜನೆಯಾದ ಮೆಗಾಸಿಟಿ ಯೋಜನೆಯಡಿ ಕೆ.ಯು.ಐ.ಎಫ್.ಡಿ.ಸಿ.ಯು ಬೆಂಗಳೂರು ಮಹಾನಗರ ಪಾಲಿಕೆಗೆ ರೂ.69.85ಕೋಟಿ ಹಣವನ್ನು ಬಿಡುಗಡೆ ಮಾಡಿದೆ.

ಕೇಂದ್ರ ಸರ್ಕಾರದಿಂದ ಸಂಸದರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಡಿ ಬೆಂಗಳೂರು ನಗರದ ಅಭಿವೃದ್ಧಿ ಕಾಮಗಾರಿಗಳಿಗೆ 96-97 ರಿಂದ 2000-01ರವರೆವಿಗೂ ಒಟ್ಟು ರೂ. 1.19 ಕೋಟಿ ಬಿಡುಗಡೆ ಮಾಡಿರುತ್ತದೆ.

ಇ) ನಗರದಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಿ ನಗರವನ್ನು ಸುಂದರವಾಗಿಸಲು ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಹಮ್ಮಿಕೊಳ್ಳಲಾಗಿದೆ. ಮತ್ತು ಮಹಾನಗರ ಪಾಲಿಕೆಯ ಆರ್ಥಿಕ ಸಂಪನ್ಮೂಲಗಳನ್ನು ಆಧರಿಸಿ ಹಂತಹಂತವಾಗಿ ನಗರವನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ. ಈ ಬಗ್ಗೆ ದಿನಾಂಕ: 12-7-2001 ರಂದು ರಾಜ್ಯ ಸರ್ಕಾರದ ಜೊತೆಗೆ ಪಾಲಿಕೆಯು ಒಡಂಬಡಿಕೆ ಕರಾರನ್ನು ಮಾಡಿಕೊಂಡಿದ್ದು, ಅಲ್ಲದೆ, ಸರ್ಕಾರವು ಮಹಾನಗರ ಪಾಲಿಕೆಗೆ 361.00 ಕೋಟಿ ರೂ.ಗಳನ್ನು 2000-2001 ರಿಂದ 2003-2004 ರವರೆಗಿನ ಅವಧಿಗೆ ಈ ಕೆಳಕಂಡ ಕಾಮಗಾರಿಗಳಿಗೆ ಬಿಡುಗಡೆ ಮಾಡಲಾಗುತ್ತಿದೆ.

1. ಮಳೆ ನೀರಿನ ಮೋರಿಗಳು : ರೂ. 110.00 ಕೋಟಿ
2. ಅಭಿವೃದ್ಧಿ ಕ್ಷೀಣ ಪ್ರದೇಶಗಳ ಸಮಗ್ರ ಅಭಿವೃದ್ಧಿ : ರೂ. 100.00 ಕೋಟಿ
3. ಹಿಂದುಳಿದ ಪ್ರದೇಶಗಳ ಪುನರುಜ್ಜೀವನ : ರೂ. 108.00 ಕೋಟಿ
4. ನೆರೆ ನಿರ್ವಹಣಾ ಕಾಮಗಾರಿಗಳು : ರೂ. 6.00 ಕೋಟಿ
5. ನಡೆಯುತ್ತಿರುವ ಬಂಡವಾಳ ಕಾಮಗಾರಿ ಪೂರ್ಣಗೊಳಿಸುವುದು (ಸುರಂಗಮಾರ್ಗ) : ರೂ 1.00 ಕೋಟಿ

6. ವಿಶೇಷ ಅಭಿವೃದ್ಧಿ ಯೋಜನೆಗಳು : ರೂ. 36.00 ಕೋಟಿ

ಇದಲ್ಲದೆ, ಸರ್ಕಾರದ ಖಾತರಿಯ ಮೇಲೆ ಹುಡ್ಕೋ ಮತ್ತಿತರ ಸಂಸ್ಥೆಗಳಿಂದ ದೀರ್ಘಾವಧಿ ಸಾಲ ರೂ.627.00 ಕೋಟಿ ಪಡೆದು ಈ ಕೆಳಕಂಡ ಯೋಜನೆಯನ್ನು ಕೈಗೆತ್ತಿಕೊಳ್ಳಲು ಉದ್ದೇಶಿಸಲಾಗಿದೆ.

1. ರಸ್ತೆಗಳ ಅಭಿವೃದ್ಧಿ

2. ರೈಲ್ವೇ ಮೇಲುಸೇತುವೆ, ಕೆಳಸೇತುವೆ ಮತ್ತು ಪಾದಚಾರಿ ಸುರಂಗ ಮಾರ್ಗ

3. ಬಹು ಅಂತಸ್ತಿನ ವಾಹನ ನಿಲ್ದಾಣಗಳು

4. ಮಾರುಕಟ್ಟೆಗಳು

5. ಕೊಳಚೆ ಪ್ರದೇಶಗಳ ಸಮಗ್ರಾಭಿವೃದ್ಧಿ

6. ಹೊಸದಾಗಿ ಸೇರ್ಪಡೆಯಾದ ಪ್ರದೇಶಗಳ ಸಮಗ್ರಾಭಿವೃದ್ಧಿ

7. ಉದ್ಯಾನವನಗಳು ಮತ್ತು ಸರೋವರಗಳ ಅಭಿವೃದ್ಧಿ ಸಾಂಸ್ಕೃತಿಕ ಕೇಂದ್ರಗಳು.

ಮೆಗಾಸಿಟಿ ಯೋಜನೆಯಡಿಯಲ್ಲಿ ಈ ಕೆಳಕಂಡ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದೆ:

ಪೂರ್ಣಗೊಂಡ ಕಾಮಗಾರಿಗಳು:

1. ಸಿಸಿ ವೃತ್ತದಿಂದ ಟೌನ್ ಹಾಲ್‌ವರೆಗೆ ಮೇಲುಸೇತುವೆ

2. ರಿಚ್ಮಂಡ್ ವೃತ್ತದಲ್ಲಿ ಮೇಲು ಸೇತುವೆ

ಮುಂದುವರಿದ ಕಾಮಗಾರಿಗಳು:

1. ಸಂಗಂ ಚಿತ್ರ ಮಂದಿರದ ಬಳಿ ಪಾದಚಾರಿ ಸುರಂಗ ಮಾರ್ಗ

2. ಯಶವಂತಪುರದ ಜೆ.ಪಿ.ಉದ್ಯಾನವನ

3. ತಾವರೆಕೆರೆ ಉದ್ಯಾನವನ

4. ಬನಶಂಕರಿಯಲ್ಲಿ ವಿದ್ಯುತ್ ಚಿತಾಗಾರ

5. ಬೊಮ್ಮನಹಳ್ಳಿ ವಿದ್ಯುತ್ ಚಿತಾಗಾರ

ಮಡಿವಾಳ ವಾಣಿಜ್ಯ ಸಂಕೀರ್ಣ

ಈ) ಈಗಾಗಲೇ ಸೃಷ್ಟೀಕರಿಸಿರುವಂತೆ, ಬೆಂಗಳೂರು ನಗರವನ್ನು ಸಿಂಗಾಪುರ ನಗರವನ್ನಾಗಿ ಮಾರ್ಪಡಿಸುವ ಉದ್ದೇಶ ಸರ್ಕಾರಕ್ಕಿಲ್ಲ. ಆದರೆ, ಬೆಂಗಳೂರು ನಗರವನ್ನು ಸಿಂಗಾಪುರ ಮಾದರಿಯಲ್ಲಿ ಅಭಿವೃದ್ಧಿಪಡಿಸುವ ಯೋಜನೆ ಸರ್ಕಾರಕ್ಕಿದೆ ಎಂಬುದನ್ನು ಸಾರ್ವಜನಿಕರಿಗೆ ತಿಳಿಸುವ ಉದ್ದೇಶವನ್ನು ಸರ್ಕಾರ ಹೊಂದಿದೆ. ಎಲ್ಲಾ ಅವಶ್ಯಕ ಕ್ರಮಗಳನ್ನು ಬೆಂಗಳೂರು ಅಭಿವೃದ್ಧಿಗೋಸ್ಕರ ತೆಗೆದುಕೊಂಡು ಮುಂಬರುವ ವರ್ಷಗಳಲ್ಲಿ ಬೆಂಗಳೂರು ನಗರವನ್ನು ಸಾಕಷ್ಟು ಅಭಿವೃದ್ಧಿಪಡಿಸಲಾಗುವುದು.

ಶ್ರೀ ಕೆ.ಶ್ರೀನಿವಾಸಗೌಡ ಕುದುವನಹಳ್ಳಿ: ಮಾನ್ಯ ಅಧ್ಯಕ್ಷರೆ, ನನ್ನ (ಅ) ಪ್ರಶ್ನೆಗೆ ಉತ್ತರವಲ್ಲಿ ''ಬೆಂಗಳೂರು ನಗರವನ್ನು ಸಿಂಗಾಪುರ್ ಆಗಿ ಬದಲಾಯಿಸುವ ಉದ್ದೇಶ ಸರ್ಕಾರಕ್ಕಿಲ್ಲ'' ಎಂದು ಕೊಟ್ಟಿರುತ್ತಾರೆ. ನಾನು ಆ ಮಾದರಿಯಲ್ಲಿ ಪರಿವರ್ತಿಸಲು ಸಾಧ್ಯವೇ ಎಂದು ಕೇಳಿದ್ದರೆ ಅವರು ಈ ರೀತಿ ಉತ್ತರ ಹೇಳಿದ್ದಾರೆ, ಇಲ್ಲಿ ಬದಲಾಯಿಸುವ ಸಾಧ್ಯತೆಯಿದೆ ಎನ್ನುವುದನ್ನು ನಾನಂತೂ ನಂಬುವುದಿಲ್ಲ, ಇದು ಆಗದೇ ಇರುವ ಕೆಲಸ. ಆದರೆ ಮಾದರಿ ಬದಲಾಯಿಸುವಂಥದ್ದಕ್ಕೆ ಅಧಿಕಾರಿಗಳು ಸರಿಯಾಗಿ ಉತ್ತರವನ್ನು ಕೊಟ್ಟಿಲ್ಲವೆಂದು ನಾನು ಭಾವಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಮಾತನಾಡುತ್ತಾ ಬೆಂಗಳೂರನ್ನು ಸಿಂಗಪುರ್ ಮಾದರಿ ಮಾಡುತ್ತೇವೆ ಎಂದಾಗ, ನಾನು ಹಲವಾರು ಸಾರಿ ಸಿಂಗಾಪುರ್‌ಗೆ ಹೋಗುವ ಅವಕಾಶ ಸಿಕ್ಕಿದ್ದು, ನನಗೆ ಮೊದಲು ಮನಸ್ಸಿನಲ್ಲಿ ಬಂದದ್ದು, ಆರ್ಚರ್ಡ್ ರೋಡ್, ರಾಬಿನ್‌ಸನ್ ರೋಡ್, ನಾರ್ತ್‌ಬ್ರಿಡ್ಜ್ ರೋಡ್ ಹೀಗೆ ಅನೇಕ ರಸ್ತೆಗಳ ಚಿತ್ರಣ ನನ್ನ ಮನಸ್ಸಿಗೆ ಬಂದು, ಅದೇ ರೀತಿಯ ರಸ್ತೆಗಳು ಬೆಂಗಳೂರಿನಲ್ಲಿ ಆಗುತ್ತವೆಂದು ನನ್ನ ಮನಸ್ಸಿನಲ್ಲಿ ಆ ದಿನ ಬಂತು, ಅದಕ್ಕಾಗಿ ನಾನು ಈ ಪ್ರಶ್ನೆ ಕೇಳಬೇಕಾಯಿತು. ಏಕೆಂದರೆ, ಇವತ್ತು ಪಟ್ಟಣಗಳು ಅಭಿವೃದ್ಧಿಯಾಗುತ್ತಿರುವ ಹಿನ್ನೆಲೆಯಲ್ಲಿ ಹಾಗೂ ಈ ನಮ್ಮ ದೇಶದಲ್ಲಿ ಅದರಲ್ಲೂ ಬೆಂಗಳೂರಿನಲ್ಲಿ ಈ ರೀತಿ ಆಗುತ್ತದೆಯೇ ಎನ್ನುವ ಅನುಮಾನ ಇದ್ದುದ್ದರಿಂದ ಇದನ್ನು ಕೇಳಿದೆ. ಅಲ್ಲಿ ಸೊಳ್ಳೆ, ನೊಣ, ಜಿರಲೆಗಳನ್ನು ನೋಡಿದರೆ ಹುಲಿಗಳನ್ನು ನೋಡಿದ ಹಾಗೆ ನೋಡುತ್ತಾರೆ, ಇವುಗಳು ಯಾರ ಮನೆಯಲ್ಲಿ ಇರುತ್ತವೆ ಅವರಿಗೆ ದಂಡ ಹಾಕುತ್ತಾರೆ, ಪ್ರತಿ ತಿಂಗಳು ಎಲ್ಲಾ ಮೋರಿಗಳಿಗೆ ಔಷಧಿ ಸಿಂಪಡಿಸಿ ಈ ಕ್ರಿಮಿಕೀಟಕಗಳನ್ನು ಕೊಲ್ಲುತ್ತಾರೆ. ಈ ರೀತಿಯ ವ್ಯವಸ್ಥೆ ನಮ್ಮ ಬೆಂಗಳೂರಿನಲ್ಲಿ ತರುವುದಕ್ಕೆ ಮಾನ್ಯ ಮುಖ್ಯಮಂತ್ರಿಗಳು ಯೋಚಿಸಿದ್ದಾರೆಯೇ? ಬೆಂಗಳೂರಿನಲ್ಲಿರುವ ಚರಂಡಿಗಳ ಅವ್ಯವಸ್ಥೆಯ ಬಗ್ಗೆ ಹೇಳುವುದಾದರೆ ಏಲ್ಸಾನ್ ಗಾರ್ಡನ್ ಏರಿಯಾವನ್ನು ಬಹುಶಃ ನೀವೂ ಕೂಡ ನೋಡಿರಬಹುದು, ಅಲ್ಲಿ ಒಂದು ದೊಡ್ಡ ತೆರದ ಮೋರಿ ಇದೆ, ಅದರಲ್ಲಿ ಉತ್ಪತ್ತಿಯಾಗುವ ಅನೇಕ ಕ್ರಿಮಿಕೀಟಕಗಳು, ಬೆಂಗಳೂರಿನ ನಗರ ವಾಸಿಗರಿಗೆ ಎಷ್ಟು ತೊಂದರೆ ಕೊಡುತ್ತಿವೆ ಎಂಬುದನ್ನು ಸರ್ಕಾರ ಅರ್ಥ ಮಾಡಿಕೊಂಡಿದೆಯೇ? ಈ ರೀತಿಯ ತೆರೆದ ಮೋರಿಗಳ ಬದಲಿಗೆ ಒಳಗಡೆ ಹೋಗುವಂಥ ಮೋರಿಗಳನ್ನು ವ್ಯವಸ್ಥೆ

ಮಾಡುವ ಉದ್ದೇಶ ಸರ್ಕಾರಕ್ಕಿದೆಯೇ?

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಬೆಂಗಳೂರನ್ನು ಉತ್ತಮವಾದ ನಗರವನ್ನಾಗಿ ಮಾಡಬಹುದಾದಂತಹ ಶಕ್ತಿ ಮತ್ತು ಸಾಮರ್ಥ್ಯ ಇಲ್ಲಿ ವಾಸವಾಗಿರುವ ಸುಮಾರು 65 ಲಕ್ಷ ಜನ ಪ್ರಜೆಗಳ ಮೇಲೆ ನಿಂತಿದೆ. ಸರ್ಕಾರ ಅನುದಾನ ಕೊಟ್ಟು ಬೆಂಗಳೂರನ್ನು ಪರಿವರ್ತಿಸಲು ಸಾಧ್ಯವಾಗುವುದಿಲ್ಲ. ಸರ್ಕಾರ ಒಂದು catalyst. ಸರ್ಕಾರ ಒಂದು facilitator. ಸರ್ಕಾರಕ್ಕೆ ಸೀಮಿತವಾದ ಜವಾಬ್ದಾರಿಗಳು ಇದ್ದು, ಮಹಾನಗರ ಪಾಲಿಕೆಗೆ ಸೀಮಿತವಾದ ಹೊಣೆಗಾರಿಕೆಗಳಿವೆ. ಅದೊಂದು ನಮ್ಮ ಕನಸು, ಬೆಂಗಳೂರು ಸಿಂಗಾಪುರ್ ಆಗುತ್ತದೆ ಎನ್ನುವ ಭ್ರಮೆಯಲ್ಲಿ ಸಿಕ್ಕಿಹಾಕಿಕೊಳ್ಳುವುದು ಬೇಡ, ನನಗೆ ಆ ಭ್ರಮೆಯಿಲ್ಲ, ನಾನು ಆ ರೀತಿ ಹೇಳಿಲ್ಲ. ನಾನು ಹೇಳಿದ್ದಕ್ಕೆ ವಿಪರೀತವಾದ ಅರ್ಥಗಳನ್ನು ಕಲ್ಪಿಸಿ, ಬೆಂಗಳೂರನ್ನು ನೀವು ಸಿಂಗಾಪುರ್ ಮಾಡಲು ಹೋಗಿದ್ದೀರಿ. ಅದನ್ನೆ ದಂಧೆ ಮಾಡಿಕೊಂಡಿದ್ದಾರೆ ಹೀಗೆ ಎಲ್ಲದಕ್ಕೂ ತಿರುಚಿ ಅದಕ್ಕೆ ಒಂದು ಪೈಂಟ್ ಮಾಡುವುದು ನಾವು ಬೆಂಗಳೂರನ್ನು ಸಿಂಗಾಪುರ್‌ನ ಬೆಂಚ್‌ಮಾರ್ಕ್ ಮಾಡಿಕೊಂಡಿದ್ದೇವೆ. ನಾನು ಸಿಂಗಾಪುರಕ್ಕೆ 1966ನೇ ಇಸವಿಯಲ್ಲಿ ಹೋಗಿದ್ದೆ, ಆಗ ತಾನೇ ಲೀಕವಾನ್‌ನ್ಯು ಎನ್ನುವವರು ಪ್ರಧಾನಿ ಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡಿದ್ದರು, ನಂತರದಲ್ಲಿ 16 ವರ್ಷಗಳ ನಂತರ ಅಂದರೆ 1980ನೇ ಇಸವಿಯಲ್ಲಿ ಪುನಃ ಸಿಂಗಾಪುರಕ್ಕೆ ಹೋದೆ, ಅಲ್ಲಿ ನಾನು ಕಂಡಂತಹ ಅಭಿವೃದ್ಧಿ ಹಾಗೂ ಬದಲಾವಣೆ ಮತ್ತು ಅಲ್ಲಿ ನೋಡಿದಂತಹ ಶಿಸ್ತು, ಬದ್ಧತೆ, ಇವುಗಳು ನನ್ನ ಮನಸ್ಸಿನ ಮೇಲೆ ಬಹಳ ದೊಡ್ಡ ಪರಿಣಾಮವನ್ನುಂಟು ಮಾಡಿತು, ಸಿಂಗಾಪುರ್‌ಗೆ ಹೋದವರು ಆ ಬದಲಾವಣೆಗಳನ್ನು ಗಮನಿಸದೇ ಇರುವುದಕ್ಕೆ ಸಾಧ್ಯವಿಲ್ಲ. ಈಗ ಸಿಂಗಾಪುರ್ ಒಂದನ್ನೇ ಮಾದರಿಯನ್ನಾಗಿ ತೆಗೆದುಕೊಳ್ಳುವುದಕ್ಕಾಗುವುದಿಲ್ಲ. ಈಗ ಕೌಲಾಲಂಪುರ ಕೂಡ ಅದೇ ರೀತಿಯಲ್ಲಿ ಒಳ್ಳೆಯ ದೃಷ್ಟಿಯಿಂದ ಬೆಳೆಯುತ್ತಿದೆ ಎಂದು ಹೇಳುತ್ತಾರೆ ಆದರೆ ನಾನು ಹೋಗಿ ನೋಡಿಲ್ಲ. ಇಲ್ಲಿ ಉತ್ತಮವಾದ ಮಳೆನೀರಿನ ಚರಂಡಿ ವ್ಯವಸ್ಥೆ ಮಾಡಬೇಕಾಗಿದೆ, ಕೊಳಚೆ ಪ್ರದೇಶಗಳ ಸಮಗ್ರ ಅಭಿವೃದ್ಧಿ ಆಗದ ಹೊರತು ಸಿಂಗಾಪುರ್ ಒಂದು ಗಗನ ಕುಸುಮವಾಗಿ ಉಳಿಯುತ್ತದೆ. ಸರ್ಕಾರದ ಗಮನವೆಲ್ಲಾ ಸ್ವಚ್ಛತೆಗಾಗಿ ಹಾಗೂ ಕೊಳಚೆ ಪ್ರದೇಶಗಳನ್ನು ಅಭಿವೃದ್ಧಿಪಡಿಸತಕ್ಕಂಥದ್ದು, ಮಳೆನೀರಿನ ಚರಂಡಿ ವ್ಯವಸ್ಥೆ, ಇಂಥವುಗಳಿಗೆ ರಾಜ್ಯ ಸರ್ಕಾರ ಹಾಗೂ ಮಹಾನಗರ ಪಾಲಿಕೆ ಹೆಚ್ಚು ಒತ್ತು ಕೊಡಬೇಕು ಎನ್ನುವ ದಿಶೆಯಲ್ಲಿ ಚಿಂತನೆ ಮಾಡುತ್ತಿದೆಯೇ ಹೊರತು ಸೌಂದರ್ಯ ದೃಷ್ಟಿಯಿಂದಾಗಲಿ ಇದನ್ನು ನೋಡುತ್ತಿಲ್ಲ. ರಸ್ತೆಗಳು ಶುಚಿಯಾಗಿರಬೇಕು. ಇಲ್ಲಿ ತೆರಿಗೆಯನ್ನು ಕೊಡುವುದಿಲ್ಲ. ಈಗ ತಾವೇನು ಹೇಳಿದಿರಿ ಅಲ್ಲಿ ಉಗುಳಿದರೆ, ಸಿಗರೇಟು ಸೇದಿದರೆ ದಂಡ ಹಾಕುತ್ತಾರೆಂದು ಹೇಳಿದಿರಿ, ಆದರೆ ಇಲ್ಲಿ ಕೊಡಬೇಕಾಗಿರುವ ತೆರಿಗೆ ಕೊಟ್ಟರೆ ಸಾಕಾಗಿದೆ. ಆ ತೆರಿಗೆಯನ್ನು ವಸೂಲಿ ಮಾಡಬೇಕಾದಾಗ ಮಾನ್ಯ ಸದಸ್ಯರುಗಳೇ ಬಂದು, ತೆರಿಗೆ ಕೊಡಬೇಡಿ ಚಳುವಳಿ ಮಾಡೋಣವೆಂದು ಹೇಳುತ್ತಾರೆ. ಆದ್ದರಿಂದ ಈ ಚಳುವಳಿಗಳು ಹಾಗೂ ತೆರಿಗೆ ಕೊಡದಿರುವಂಥ ಪ್ರವೃತ್ತಿಗಳನ್ನು ನೋಡಿದಾಗ ಸಿಂಗಾಪುರ್ ಎನ್ನುವುದು ಗಗನ

ಕುಸುಮವಾಗಿಯೇ ಉಳಯುತ್ತದೆ.

ಶ್ರೀ ಹೆಚ್.ಎಸ್.ಶಂಕರಲಿಂಗೇಗೌಡ: ಮೈಸೂರನ್ನು ಹಾಂಗ್‌ಕಾಂಗನ್ನಾಗಿ ಮಾಡಿ.

ಶ್ರೀ ಎಸ್.ಎಂ.ಕೃಷ್ಣ: ಮೈಸೂರನ್ನು ಹಾಂಗ್‌ಕಾಂಗನ್ನಾಗಿ ಮಾಡಿ ಗುಲಬರ್ಗಾವನ್ನು ನ್ಯೂಯಾರ್ಕ್‌ನ್ನಾಗಿ ಮಾಡುತ್ತೇನೆ.

12.20 ಪಿಎಂ

ಶ್ರೀ ಎಸ್.ಸುರೇಶ್‌ಕುಮಾರ್(ರಾಜಾಜಿನಗರ): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಇಲ್ಲಿನ ಸನ್ನಿವೇಶವನ್ನು ನೋಡಿದಾಗ ಎಲ್ಲೋ ಒಂದು ತರಹ ತಾವು ಏಷನ್‌ನ್ನು ಇಟ್ಟುಕೊಂಡಿರುವುದೇ ತಪ್ಪು ಎಂದು ಎನ್ನುವ ರೀತಿಯಲ್ಲಿ ಸ್ಥಿತಿ ಇದೆ ಎಂದು ಮಾತನಾಡಿದ್ದಾರೆ. We share your vision. ಆ ರೀತಿಯಾಗಿ ಅದಾಗಬೇಕು. ಇವತ್ತು ಇರುವ ಸ್ಥಿತಿಯಲ್ಲಿ ಬೆಂಗಳೂರು ಇರಬಾರದು. ಇದರ ಜೊತೆ ಜೊತೆಗೆ ನಮ್ಮಲ್ಲಿ ಇಲಾಖೆಗಳಲ್ಲಿ ಇರುವವರ ಮನೋಪ್ರವೃತ್ತಿಯನ್ನು ಬದಲಾಯಿಸಬೇಕು. ಈಗ ಅನೇಕ ಯೋಜನೆಗಳನ್ನು ಘೋಷಿದ್ದೇವೆ. ಇದಕ್ಕಾಗಿ ಹಲವಾರು ಕೋಟ ರೂಪಾಯಿಗಳನ್ನು ಬಿಡುಗಡೆ ಮಾಡುತ್ತಿದ್ದೇವೆ. ನಾವು ಈ ಎರಡರ ಕಡೆಗೆ ಗಮನವನ್ನು ಕೊಡುತ್ತಿದ್ದೇವೆಯೇ ಎಂಬುದನ್ನು ನೋಡಬೇಕು. (i) ಯಾವುದೇ ಯೋಜನೆಯನ್ನು ನಿಗದಿತ ಸಮಯದಲ್ಲಿ (ಟೈಮ್ ಬೌಂಡ್ ಪ್ರೋಗ್ರಾಮ್) ನಾವು ಮುಗಿಸುತ್ತಿದ್ದೇವೆಯೇ (ii) ಗುಣಮಟ್ಟ, ನಮ್ಮಲ್ಲಿ 125 ಕೋಟಿರೂಪಾಯಿಗಳ ಬಾಂಡ್ ರೋಡ್ ಇದೆ, ಯಾವ ರೀತಿಯಾಗಿ ನಾವು ಯೋಜನೆಯನ್ನು ಮಾಡಿದ್ದಕ್ಕೆ it is the classic examples ರಿಚ್ಮಂಡ್ ಸರ್ಕಲ್ ಫ್ಲೈ ಓವರ್ ಬಗ್ಗೆ ಹೇಳುವುದಾದರೆ, ಅದು ಯಾವ ಸಮಯದಲ್ಲಿ ಮುಗಿಯಬೇಕಾಗಿತ್ತು, ಅದು ಮುಂದುವರಿಯುತ್ತಾ ಬಂದಿಲ್ಲ. ಇದರ ಬಗ್ಗೆ ನಾನು ಸರ್ಕಾರವನ್ನು ಕೇಳುವುದೇನೆಂದರೆ, ಗುಣಮಟ್ಟವನ್ನು ಖಾತ್ರಿ ಮಾಡಿಕೊಳ್ಳುವ ಬಗ್ಗೆ, ಇನ್ನೊಂದು ನಿಗದಿತ ಸಮಯದೊಳಗಾಗಿ ಅದು ಮುಗಿಯುವಂತೆ ಮಾಡುವ ಬಗ್ಗೆ ಯಾವ ರೀತಿಯಾಗಿ ಯೋಚನೆ ಮಾಡಬಹುದು. ಇನ್ನು ಎರಡನೆಯದಾಗಿ, ಸಿಂಗಾಪುರ್‌ನ್ನು ನೋಡಿದಾಗ ಬೆಂಗಳೂರಿನ ದೊಡ್ಡ ಸಮಸ್ಯೆಯೆಂದರೆ ಟ್ರಾಫಿಕ್. ಈ ಇಎಆರ್‌ಎಲ್‌ಟಿಎಸ್ ಬಗ್ಗೆ ಅನೇಕ ಸಲ ಕೇಳಿಕೊಂಡೇ ಬಂದಿದ್ದೇವೆ. ನಾವು 1995ರಿಂದಲೂ ಸೆಸ್‌ನ್ನು ಕಟ್ಟುತ್ತಲೇ ಬಂದಿದ್ದೇವೆ, ಆ ಇಎಆರ್‌ಎಲ್‌ಟಿಎಸ್‌ನ್ನು ತಂದು ಟ್ರಾಫಿಕ್ ಸಮಸ್ಯೆಯನ್ನು ಪರಿಹಾರ ಮಾಡುವುದಕ್ಕಾಗಿ ಸರ್ಕಾರ ಯೋಚನೆ ಮಾಡುತ್ತದೆಯೇ?

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಏಷನ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ, ಅವರಿಗೆ ನಾನು ಆಭಾರಿಯಾಗಿದ್ದೇನೆ. ಅಲ್ಲಿ ಕೊಂಚಮಟ್ಟಿಗೆ ಅಡೆತಡೆಗಳು ಬಂದರೂ ಕೂಡ ನಾವು ಖಾಸಗಿ ಮತ್ತು ಪಬ್ಲಿಕ್ ಪ್ರೈವೇಟ್ ಕೋ-ಆಪರೇಷನ್ ಆಧಾರದ ಮೇಲೆ ಬೆಂಗಳೂರಿನ ಗುಣಮಟ್ಟವನ್ನು ಉತ್ತಮಪಡಿಸುವುದಕ್ಕೆ ಬುದ್ಧಿಪೂರ್ವಕವಾಗಿ

ಪ್ರಯತ್ನಗಳನ್ನು ಮಾಡಬೇಕಾಗುತ್ತದೆ. ಇವೆಲ್ಲವೂ ಆಗಬೇಕಾದರೆ, ಆಸ್ತಿ ತೆರಿಗೆ ಪ್ರಾವತಿಯನ್ನು ಏಳಂಬ ಮಾಡದೆ ಜನರು ಕೊಡುವುದಕ್ಕೆ ಸಿದ್ಧರಿರಬೇಕು. ಕಸಕಡ್ಡಿಯನ್ನು ಎಲ್ಲೆಂದರಲ್ಲಿ ಹರಡತಕ್ಕಂತಹ ಪ್ರವೃತ್ತಿಯ ಮೇಲೆ ಕಡಿವಾಣವನ್ನು ಹಾಕಬೇಕು. ಸಾರ್ವಜನಿಕ ಸ್ಥಳಗಳಲ್ಲಿ ಗಲೀಜು ಮಾಡತಕ್ಕಂಥದ್ದು ಅದನ್ನು ನಾವು ಸ್ವಯಂಪ್ರೇರಿತರಾಗಿ ಅದರ ಮೇಲೆ ನಿಯಂತ್ರಣವನ್ನು ಹಾಕಬೇಕು. ಅಭಿವೃದ್ಧಿ ಕಾರ್ಯಕ್ರಮಗಳು ಎಲ್ಲಿವೆಯೋ ಅಲ್ಲಿ ಸಕ್ರಿಯವಾಗಿ ಭಾಗವಹಿಸತಕ್ಕಂತಹ ಮನೋಭಾವನೆ ಬೆಳೆಯಬೇಕು. ವಾಹನಗಳು ಪಲ್ಯೂಟ್ ಮಾಡದ ರೀತಿಯಲ್ಲಿ ಆ ಪಲ್ಯೂಷನ್ ಲೆವೆಲ್ಸ್‌ನ್ನು ನಾವಾಗಿಯೇ ತಡೆಗಟ್ಟಬೇಕು. ಈಗ ದೆಹಲಿಯಲ್ಲಿ ಸುಪ್ರೀಂಕೋರ್ಟ್ ಮತ್ತು ಹೈಕೋರ್ಟ್‌ನ ನಿರ್ದೇಶನದ ಮೇರೆಗೆ ಬದಲಾವಣೆ ಏನು ಆಗುತ್ತಿದೆ ಅಂಥದರ ಬಗ್ಗೆಯೂ ಕೂಡ ನಾವು ನೀವು ಯೋಚನೆ ಮಾಡತಕ್ಕಂತಹ ದಿಸೆಯಲ್ಲಿ ಬೆಂಗಳೂರಿನ ನಾಗರೀಕರನ್ನು ನಾವು ತಯಾರು ಮಾಡಬೇಕಾಗುತ್ತದೆ. ಈಗಾಗಲೇ ರಾಜ್ಯಸರ್ಕಾರ, ಬೆಂಗಳೂರು ಅಜೆಂಡಾ ಟಾಸ್ಕ್‌ಫೋರ್ಸ್‌ನವರು ಇದಕ್ಕೆ ಕೆಲವು ಕ್ರಮಗಳನ್ನು ಹಾಕಿಕೊಂಡಿದ್ದಾರೆ. ಅವರ ಜೊತೆಯಲ್ಲಿ ಸಹಕಾರವನ್ನು ಕೊಟ್ಟರೆ ಉತ್ತರೋತ್ತರ ಒಂದು ಉತ್ತಮ ನಗರವಾಗಿ ಬೆಂಗಳೂರು ಹೊರ ಹೊಮ್ಮುವುದಕ್ಕೆ ಸಾಧ್ಯವಾಗುತ್ತದೆಂಬುದು ಸರ್ಕಾರದ ನಂಬಿಕೆ ತಾವು ರಿಚ್ಮಂಡ್‌ಸರ್ಕಲ್ ಫ್ಲೈಓವರ್ ವಿಚಾರವನ್ನು ಪ್ರಸ್ತಾಪ ಮಾಡಿದ್ದೀರಿ, ಕಳೆದ ಒಂದು ವರ್ಷ 8 ತಿಂಗಳಲ್ಲಿ 35 ಕಿಲೋಮೀಟರ್ ರಿಂಗ್‌ರೋಡ್‌ನ್ನು ಮುಗಿಸಿದ್ದೇವೆ. ಇದರಿಂದಾಗಿ 10 12 ಸಾವಿರ ಟ್ರಕ್‌ಗಳು ಊರಿನ ಒಳಗೆ ಬಂದು ಇಲ್ಲಿ ವಾಯು ಮಾಲಿನ್ಯವನ್ನು ಮಾಡತಕ್ಕಂಥದ್ದನ್ನು ನಾವು ನಿವಾರಣೆ ಮಾಡಿದ್ದೇವೆ. ಇನ್ನೂ 35 ಕಿಲೋಮೀಟರ್ ರಸ್ತೆಗಳು ರಿಂಗ್‌ರೋಡ್‌ಗಳು ಆಗಬೇಕಾಗಿದೆ, ಅದರ ಬಗ್ಗೆ ಈಗಾಗಲೇ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಅದನ್ನು ಕೂಡ ಒಂದು ಯೋಜಿತ ಅವಧಿಯಲ್ಲಿ, ನಿಗದಿತ ವೇಳೆಯಲ್ಲಿ, ಮುಗಿಸಬೇಕೆಂದು ದೃಷ್ಟಿಯನ್ನು ಇಟ್ಟುಕೊಂಡಿದ್ದೇವೆ. ಮುಂದಿನ 3-4 ವರ್ಷಗಳಲ್ಲಿ ಸುಮಾರು 300 ರಿಂದ 400 ಕೋಟಿ ರೂಪಾಯಿಗಳನ್ನು ನಾವು ಬೆಂಗಳೂರು ಮಹಾನಗರಪಾಲಿಕೆಯ ಜೊತೆಯಲ್ಲಿ ಈಗಾಗಲೇ ಒಂದು ಒಪ್ಪಂದವನ್ನು ಮಾಡಿಕೊಂಡಿದ್ದೇವೆ. ಆ ಒಪ್ಪಂದದ ಪ್ರಕಾರ ಒಂದು ಸಾವಿರ ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕೆಂಬ ಗುರಿಯನ್ನು ಇಟ್ಟುಕೊಂಡಿದ್ದೇವೆ. ಈ ಗುರಿಯೆಲ್ಲವೂ ಕೂಡ ಸಾಬೀತಾಗಬೇಕಾದರೆ ಜನರ ಹಾಗೂ ಜನಪ್ರತಿನಿಧಿಗಳ ಸಕ್ರಿಯ ಸಹಕಾರ ಸಿಕ್ಕಿದರೆ ಇವೆಲ್ಲವನ್ನೂ ಕೂಡ ನಾವು ಮುಟ್ಟುವುದಕ್ಕೆ ಸಾಧ್ಯವಾಗುತ್ತದೆಂಬ ಆಶಾಭಾವನೆಯನ್ನು ಈಗಲೂ ಹೊಂದಿದ್ದೇನೆ. ಆದರೆ ಆ ವಿಷನ್‌ನ್ನು ಬಿಡಲಿಲ್ಲ. ಆ ಇಎಆರ್‌ಎಲ್‌ಎಸ್ ಒಂದು ಭಾವನೆ ಏನೆಂದರೆ, ಅದಕ್ಕಾಗಿ ದೊಡ್ಡ ಪ್ರಮಾಣದ ಹಣ ವಿನಿಯೋಗ ಬೇಕಾಗುತ್ತದೆ. ಅದರಿಂದ ಯಾವ ಪ್ರಮಾಣದಲ್ಲಿ ನಮ್ಮ ಟ್ರಾಫಿಕ್ ನಿರ್ವಹಣಾ ಸಾಮರ್ಥ್ಯ ಇನ್ನೂ ಉತ್ತಮವಾಗುವುದಕ್ಕೆ ಅದೊಂದೇ ಆಲ್ಟರ್‌ನೇಟಿವ್ ಅಲ್ಲ ಎನ್ನತಕ್ಕಂತಹ ಮಾತು ಬಂದಿದೆ. ಮೆಟ್ರೋ ವ್ಯವಸ್ಥೆಯನ್ನು ಮಾಡಬೇಕೆಂಬ ಬಗ್ಗೆ ಪರ್ಯಾಯ ಸಲಹೆಯೂ ನಮಗೆ ಬಂದಿದೆ. ಅದರ ಬಗ್ಗೆ ಸರ್ಕಾರದವರು

ಯೋಚನೆಯನ್ನು ಮಾಡುತ್ತಿದ್ದಾರೆ. ನಾವು ಅಂತಿಮವಾಗಿ ಇದರ ವಿಚಾರದಲ್ಲಿ ಕೊಂಚಮಟ್ಟಿಗೆ ನಿಧಾನ ವ್ಯವಸ್ಥೆ ಇದೆ ಎಂಬ ಬಗ್ಗೆ ನಾನು ಒಪ್ಪುತ್ತೇನೆ. ಆದರೆ ಮುಂದಿನ ದಿನಗಳಲ್ಲಿ ಇದರ ಬಗ್ಗೆ ಒಂದು ಯೋಗ್ಯ ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಸಾಧ್ಯವಾಗಬಹುದು. ಈ ವರ್ಷದ ರೈಲ್ವೆ ನಮ್ಮ ಮುಂದೆ ಇರತಕ್ಕಂಥದ್ದು, ಇನ್ನೊಂದು ಸ್ಪೆಷ್ಟೀಯ್ಸ್ ಅದರ ಒಂದು ಪ್ರೆಸೆಂಟೇಷನ್ ಅನ್ನೂ ಕೂಡ ನಮಗೆ ಕೊಟ್ಟಿದ್ದಾರೆ. ಇದರಲ್ಲಿ ಯಾವುದನ್ನು ನಾವು ಕಾರ್ಯ ರೂಪಕ್ಕೆ ತರುವುದಕ್ಕೆ ಸಾಧ್ಯವಾಗುತ್ತದೆ ಎಂಬ ಬಗ್ಗೆ ಯೋಚನೆಯನ್ನು ಮಾಡಿ ಅನಂತರ ನಿರ್ಧಾರವನ್ನು ತೆಗೆದುಕೊಳ್ಳೋಣ.

ಅಧ್ಯಕ್ಷರು: ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.